ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ

ಮಹಿಳಾ ಕಥಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು

ಸಂಶೋಧನ ವಿದ್ಯಾರ್ಥಿನಿ

ಸುವರ್ಣ

ಮಾರ್ಗದರ್ಶಕರು

ಪ್ರೊ. ಮಹೇಶ ಚಿಂತಾಮಣಿ

ಹಿರಿಯ ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ

ಕನ್ನಡ ವಿಷಯದಲ್ಲಿ ಪಿಎಚ್.ಡಿ ಅಧ್ಯಯನಕ್ಕಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧದ

ಪೂರ್ವಭಾವಿ ಸಾರಲೇಖ

೨೦೨೪

ಮಹಿಳಾ ಕಥಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು

(ಪ್ರಾತಿನಿಧಿಕ ಕಥೆಗಾರ್ತಿಯರನ್ನು ಅನುಲಕ್ಷಿಸಿ)

ಪರಿವಿಡಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

- ಪ್ರಸ್ತಾವನೆ
- ಅಧ್ಯಯನದ ಉದ್ದೇಶ
- ಅಧ್ಯಯನದ ವ್ಯಾಪ್ತಿ
- ಅಧ್ಯಯನದ ಮಹತ್ವ
- ಅಧ್ಯಯನದ ವೈಧಾನಿಕತೆ
- ಪೂರ್ವಾಧ್ಯಾಯನ ಸಮೀಕ್ಷೆ

ಅಧ್ಯಾಯನ : ಒಂದು

ಕನ್ನಡ ಮಹಿಳಾ ಕಥಾ ಸಾಹಿತ್ಯದ ಹಿನ್ನೆಲೆ

೧.೧ ಸ್ವಾತಂತ್ರ್ಯ ಪೂರ್ವದ ಮಹಿಳಾ ಕಥೆಗಾರ್ತಿಯರು

೧.೨ ಸ್ವಾತಂತ್ರ್ಯ ನಂತರದ ಮಹಿಳಾ ಕಥೆಗಾರ್ತಿಯರು

ಅಧ್ಯಾಯ : ಎರಡು

೨.೧ ಕಥೆಗಾರ್ತಿಯರ ಬದುಕು ಮತ್ತು ಬರಹ

ಅಧ್ಯಾಯ : ಮೂರು

೩.೧ ಪ್ರತಿರೋಧದ : ಪರಿಕಲ್ಪನಾತ್ಮಕ ಅಧ್ಯಯನ

ಅಧ್ಯಾಯ : ನಾಲ್ಕು

ಮಹಿಳಾ ಕಥಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು

೪.೧ ಸಾಮಾಜಿಕ ಪ್ರತಿರೋಧದ ನೆಲೆಗಳು

೪.೨ ಧಾರ್ಮಿಕ ಪ್ರತಿರೋಧದ ನೆಲೆಗಳು

೪.೩ ಕೌಟುಂಬಿಕ ಪ್ರತಿರೋಧದ ನೆಲೆಗಳು

೪.೩ ಕೌಟುಂಬಿಕ ಪ್ರತಿರೋಧದ ನೆಲೆಗಳು

೪.೪ ಶೈಕ್ಷಣಿಕ ಪ್ರತಿರೋಧದ ನೆಲೆಗಳು

೪.೫ ರಾಜಕೀಯ ಪ್ರತಿರೊಧದ ನೆಲೆಗಳು

೪.೬ ವೈಚಾರಿಕ ಪ್ರತಿರೋಧದ ನೆಲೆಗಳು

ಅಧ್ಯಾಯ : ಐದು

೫.೧ ಮಹಿಳಾ ಕಥಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳ ತೌಲನಿಕ ನೋಟ

- **ಸಮಾರೋಪ**
- ಅಧ್ಯಯನದ ಫಲಿತಗಳು
- ಹೊಸ ಅಧ್ಯಯನದ ಸಾಧ್ಯತೆಗಳು

ಅನುಬಂಧಗಳು

ಅ) ಆಕರ ಗ್ರಂಥಗಳು

ಆ) ಪರಾಮರ್ಶನ ಗ್ರಂಥಗಳು

ಮಹಿಳಾ ಕಥಾ ಸಾಹಿತ್ಯಾದಲ್ಲಿ ಪ್ರತಿರೋಧದ ನೆಲೆಗಳು

(ಪ್ರಾತಿನಿಧಿಕ ಕಥೆಗಾರ್ತಿಯರನ್ನು ಅನುಲಕ್ಷಿಸಿ)

ಪ್ರಸ್ತಾವನೆ :

ಕನ್ನಡ ಸಾಹಿತ್ಯವು ಸುದೀರ್ಘವಾದ ಇತಿಹಾಸವನ್ನು ಹೊಂದಿದೆ. ಕವಿರಾಜಮಾರ್ಗ, ವಡ್ಡಾರಾಧನೆ ಕೃತಿಯಿಂದ ಹಿಡಿದು ಇಂದಿನ ಆಧುನಿಕ ಕಾಲದವರಗೆ ಸಮೃದ್ಧವಾಗಿ ಬೆಳೆದು ಬಂದಿದೆ. ಹೊಸಗನ್ನಡ ಸಾಹಿತ್ಯ ಹಲವಾಲು ಪ್ರಕಾರಗಳಲ್ಲಿ ಸಮೃದ್ಧವಾಗಿ ಬೆಳೆದು ಬಂದಿರುವುದು ಕಾಣಬಹುದು. ಹೊಸಗನ್ನಡ ಸಾಹಿತ್ಯ ರೂಪಗಳಾದ ಕಾವ್ಯ, ಕಥೆ, ಕಾದಂಬರಿ, ನಾಟಕ, ಲಲಿತ ಪ್ರಬಂಧ ಮುತಾಂದ ಹೊಸ ಪ್ರಕಾರಗಳು ಕಂಡುಬರುತ್ತವೆ. ಅವುಗಳಲ್ಲಿ ಕಥಾ ಸಾಹಿತ್ಯವು ಒಂದಾಗಿದೆ. ಸಣ್ಣ ಕಥೆಗೆ ಒಂದು ರೂಪ ತಂದುಕೊಟ್ಟವರು ಮಾಸ್ತಿಯವರು. ಇವರ ನಂತರ ಕುವೆಂಪು, ಬೇಂದ್ರೆ, ಕಾರಂತರು ಮುಂತಾದವರು ಕಥಾ ಸಾಹಿತ್ಯವನ್ನು ಕಟ್ಟಿ ಬೆಳೆಸಿದವರು. ಪುರುಷರಂತೆ ಮಹಿಳೆಯರು ಕಥಾ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಗಮರ್ನಾಹವಾಗಿದೆ. ಮಹಿಳೆಯರು ತಮ್ಮದೇ ಆದ ಅನುಭವ, ಆಲೋಚನೆ, ಪರಿಸರ, ತವಕ, ತಲ್ಲಣಗಳ ಹಿನ್ನಲೆಯಲ್ಲಿ ಅವರು ಸೃಜಿಸಿದ ಕಥಾ ಸಾಹಿತ್ಯ ಅಧ್ಯಯನಕ್ಕೆ ಯೋಗ್ಯವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಮಹಿಳೆಯರು ಸಾಹಿತ್ಯ ರಚನೆ ಮಾಡಿದ್ದು ತೀರಾ ವಿರಳ. ಸ್ವಾತಂತ್ರ್ಯದ ನಂತರದಲ್ಲಿ ಮಹಿಳೆ ಪುರುಷರಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದನ್ನು ಕಾಣಬಹುದು. ತಾನು ಸ್ವತಂತ್ರವಾಗಿ ಜೀವಿಸುವ ಆಲೋಚಿಸುವ, ಚಿಂತನೆಗೈಯುವ ವಿಚಾರಿಸುವ ಅಭಿವ್ಯಕ್ತ ಸ್ವಾತಂತ್ರ್ಯವನ್ನು ಅವಳು ಪಡೆದಿದ್ದಾಳೆ. ಹೀಗಾಗಿ ಅವಳ ಅನುಭವದ ಕ್ಷಿತಿಜ ವಿಸ್ತಾರವಾಗಿದೆ. ಆ ಒಟ್ಟು ಸಾಹಿತ್ಯವನ್ನು ಒರೆಗೆ ಹಚ್ಚಿ ಅಧ್ಯಯನ ಮಾಡುವ ಅಗತ್ಯವಿದೆ.

ಅಧ್ಯಯನದ ಉದ್ದೇಶ

ಕನ್ನಡ ಸಾಹಿತ್ಯ ಲೋಕದಲ್ಲಿ ಮಹಿಳಾ ಸಾಹಿತ್ಯಕ್ಕೆ ಎಂಟುನೂರು ವರ್ಷಗಳ ಇತಿಹಾಸವಿದೆ. ಅಕ್ಕಮಹಾದೇವಿಯಿಂದ ಇಂದಿನವರೆಗಿನ ಕನ್ನಡ ಮಹಿಳಾ ಸಾಹಿತ್ಯ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಬದುಕಿನ ಬದಲಾವಣೆಗಳೊದಿಗೆ ಏಳುಬೀಳುಗಳನ್ನು ಕಾಣುತ್ತ ಬಂದಿದೆ. ನವೋದಯದಿಂದ ಇಂದಿನವರೆಗೆ ಮಹಿಳಾ ಸಣ್ಣ ಕಥಾ ಸಾಹಿತ್ಯದ ಮೂಲಕ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳ ಸ್ವರೂಪವನ್ನು ಗುರುತಿಸುವುದೇ ಈ ಅಧ್ಯಯನದ ಉದ್ದೇಶವಾಗಿದೆ. ಮಹಿಳಾ ಕಥಾ ಸಾಹಿತ್ಯದ ಅದ್ಯಯನಕ್ಕೆ ಕನ್ನಡ ಸಾಹಿತ್ಯ ಲೋಕದಲ್ಲಿ ಕಾಲ ವಿಂಡಗನೆ ಕ್ರಮವನ್ನು ಮಾಡಲಾಗಿದೆ. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಮಹಿಳಾ ಸಾಹಿತ್ಯದ ಹಿನ್ನಲೆಯಲ್ಲಿ ನವೋದಯ, ಪ್ರಗತಿಶೀಲ, ನವ್ಯ, ನವೋತ್ತರ ಇವುಗಳ ಜೊತೆ ಮಹಿಳಾ ಸಾಹಿತ್ಯದ ಆಂತರಿಕ ಸಂಬಂಧವನ್ನು ಹೊಂದಿದೆ.

ಸಾಮಾನ್ಯವಾಗಿ ಅನೇಕ ಲೇಖಕಿಯರು ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಹೀಗೆ ಎರಡು ಕೆಲವೊಮ್ಮೆ ಮೂರು ಕಾಲಘಟ್ಟಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. ಒಬ್ಬ ಮಹಿಳಾ ಲೇಖಕಿ ನಿಖರವಾಗಿ ಇದೇ ಕಾಲಘಟ್ಟಕ್ಕೆ ಸೀಮಿತವಾಗಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ವರ್ಗೀಕರಣವನ್ನು ಸ್ಥೂಲವಾಗಿ ಬಳಸಿಕೊಳ್ಳಲಾಗಿದೆ. ಲೇಖಕಿಯರ ಬರವಣಿಗೆಯ ಆರಂಭಕಾಲ ಮತ್ತು ನವೋತ್ತರ ಕಾಲದ ಬಂಡಾಯದ ಅವಧಿಯನ್ನು ಕೇಂದ್ರವಾಗಿರಿಸಿಕೊಂಡು ಅವರ ಕಥೆಗಳಲ್ಲಿ ಪ್ರತಿರೋಧದ ನೆಲೆಗಳನ್ನು ಮತ್ತು ಆಶಯವನ್ನು ಗುರುತಿಸುವ ಪ್ರಯತ್ನ ಮಾಡುವುದಾಗಿದೆ.

ಅಧ್ಯಯನದ ವ್ಯಾಪ್ತಿ

ಮಹಿಳಾ ಸಣ್ಣ ಕಥೆಯ ವ್ಯಾಪ್ತಿ ವಿಶಾಲವಾಗಿದೆ. ಸಂಶೋಧನ ಮಹಾಪ್ರಬಂಧದ ಅಧ್ಯಯನದ ಮಿತಿಯಿಂದಾಗಿ ಸೀಮಿತ ವ್ಯಾಪ್ತಿಯನ್ನು ಹಾಕಿಕೊಳ್ಳಲಾಗಿದೆ. ನನ್ನ ಸಂಶೋಧನಾ ಪ್ರಬಂಧಕ್ಕೆ ಹೊಸಗನ್ನಡದ ಎಲ್ಲಾ ಕಾಲಘಟ್ಟದ ಕಥೆಗಾರ್ತಿಯರನ್ನು ಆಯ್ಕ ಮಾಡಿಕೊಳ್ಳಲಾಗಿದೆ. ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ವೀಣಾ ಶಾಂತೇಶ್ವರ್, ಸಾರಾ ಅಬೂಬಕ್ಕರ್, ಗೀತಾ ನಾಗಭೂಷಣ್, ಬಿ. ಟಿ. ಲಲಿತಾ ನಾಯಕ್, ವೈದೇಹಿ, ಅವರನ್ನು ಪ್ರಾತಿನಿಧಿಕವಾಗಿ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

ಅಧ್ಯಯನದ ವೈಧಾನಿಕತೆ

‘ಕನ್ನಡ ಮಹಿಳಾ ಕಥಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು’ ಎಂಬ ಶೀರ್ಷಿಕೆಯ ವ್ಯಾಪ್ತಿಯಲ್ಲಿ ಪರಿನಣಸಿರುವ ಸೀಮಿತ ಕಥೆಗಾರ್ತಿಯರನ್ನು ಅಧ್ಯಯನಕ್ಕೆ ಒಳಪಡಿಸಿರುವ ಈ ಸಂಶೋಧನೆ ಗುಣಾತ್ಮಕ ಸ್ವರೂಪದ್ದಾಗಿರುತ್ತದೆ. ಮಹಿಳಾ ಕಥೆಗಾತಿಯರು ತಮ್ಮ ಕಥೆಗಳಲ್ಲಿ ಪ್ರತಿಭಟನಾತ್ಮಕ ಪಾತ್ರಗಳನ್ನು ಸೃಜೀಸಿರುವ ನೆಲೆಗಳು, ಸ್ತ್ರೀ ಸಂವೇದನೆಯ ಪಾತ್ರಗಳ ಸೃಷ್ಟಿ, ಪಿತೃ ಪ್ರಧಾನ ವ್ಯವಸ್ಥೆ ಹೆಣ್ಣನ್ನು ಹೇಗೆ ಕಂಡಿದೆ ಎಂಬ ಆಶಯಗಳನ್ನು ವಿಮರ್ಶಾತ್ಮವಾಗಿ ಅಧ್ಯಯನದಲ್ಲಿ ವಿವರಿಸಲಾಗಿದೆ. ಮಹಿಳೆಯರ ಕಥೆಗಳನ್ನು ವಿಶ್ಲೇಷಣೆ ಪ್ರಾಯೋಗಿಕ ವಿಮರ್ಶಾತ್ಮಕವಾಗಿ ನೋಡಲಾಗುತ್ತದೆ. ಈ ಮೂಲಕ ಮಹಿಳಾ ಕಥಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳನ್ನು ಮತ್ತು ಅವುಗಳ ಆಶಯವನ್ನು ಆಶಯವನ್ನು ಗುರುತಿಸಲಾಗಿದೆ. ಈ ಸಂಶೋಧನಾ ಅಧ್ಯಯನದ ಅನುಕೂಲಕ್ಕಾಗಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ಮಹತ್ವ, ವೈಧಾನಿಕೆ ಮತ್ತು ಪೂರ್ವಾಧ್ಯಯನ ಸಮೀಕ್ಷೆ, ಸಮಾರೋಪವನ್ನು ಹೊರತುಪಡಿಸಿ ಐದು ಅಧ್ಯಾಯಗಳನ್ನು ಒಳಗೊಂಡಿದೆ.

ಪೂರ್ವಾಧ್ಯಯನ ಸಮೀಕ್ಷ

ಮಹಿಳಾ ಕಥಾ ಸಾಹಿತ್ಯ ಏಳೆಂಟು ದಶಕಗಳಿಂದ ಹುಲುಸಾಗಿ ಬೆಳೆದಿದೆ. ಮಹಿಳೆಗೆ ಸಣ್ಣ ಆಕರ್ಷಿಸುವಷ್ಟು ಬೇರೆ ಸಾಹಿತ್ಯ ಪ್ರಕಾರ ಆಕರ್ಷಿಸಿಲ್ಲ ಎಂದು ಹೇಳಬಹುದು. ಇಂದಿನ ಮಹಿಳಾ ಕಥೆಗಾರ್ತಿಯರ ಕಥಾ ಸಾಹಿತ್ಯವು ಪುರುಷ ಲೇಖಕರಿಗೆ ಕಡಿಮೆ ಇಲ್ಲದಂತೆ ಬರೆದಿದ್ದಾರೆ. ಕನ್ನಡ ಮಹಿಳಾ ಕಥಾ ಸಾಹಿತ್ಯಕ್ಕೆ ಸುಧೀರ್ಘವಾದ ಇತಿಹಾಸವಿದ್ದರೂ ಅದು ಮಹಿಳಾ ಲೋಕದಲ್ಲಿಯೇ ಉಳಿದಕೊಂಡಿತು. ನಮ್ಮ ಕನ್ನಡ ಸಾಹಿತ್ಯದ ವಿಮರ್ಶಾ ವಲಯ ಅದನ್ನು ಗಂಭೀರವಾಗಿ ತೆಗೆದುಕೊಳ್ಳದೆ ನಿರ್ಲಕ್ಷ್ಯ ಮಾಡಿತು. ಸ್ತ್ರೀಯರ ಮನೆಯೊಳಗಿನ ಸುಖ–ದುಃಖಗಳು ನೋವು ನಲಿವುಗಳು ಬೀದಿಗೆ ಬರದೆ ಅಡುಗೆ ಮನೆಯ ಸಾಹಿತ್ಯವಾಗಿ ಉಳಿದುಕೊಂಡಿತು. ಮಹಿಳಾ ಸಾಹಿತ್ಯವನ್ನು ವಿಮರ್ಶೆ, ಸಂಶೋಧನೆಗೆ ಒಳಪಡಿಸಲು ವರ್ಷಗಳೇ ಬೇಕಾಯಿತು. ಪ್ರಸ್ತುತ ನನ್ನ ಸಂಶೋಧನ ಮಹಾಪ್ರಬಂಧವು ಮಹಿಳಾ ಕಥಾ ಸಾಹಿತ್ಯವನ್ನು ಹೊಸ ಆಯಾಮದಿಂದ ನೋಡುವ ಪ್ರಯತ್ನವಾಗಿದೆ.

೧) ಜಿ. ಎಸ್. ಆಮೂರ ಅವರ ' ಕನ್ನಡ ಕಥನ ಸಾಹಿತ್ಯ : ಸಣ್ಣ ಕಥೆ' ಕೃತಿಯಲ್ಲಿ ಮಹಿಳಾ ಕಥಾ ಸಾಹಿತ್ಯದ ಕುರಿತು ಒಂದು ಅಧ್ಯಾಯವಿದೆ.

೨) ಡಾ. ವಿಜಯಶ್ರೀ ಸಬರದ ಅವರ ಸಂಪಾದಕತ್ವದಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಪ್ರಸಾರಾಂಗ ಇವರು ಸಣ್ಣ ಕಥೆಗೆ ಸಂಬಂಧಿಸಿದ ಬೃಹತ್ ಸಂಪುಟವಾದ ' ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ : ಸಂಪುಟ–೨ ಸಣ್ಣಕಥೆ' ಕೃತಿಯು ಮಹಿಳಾ ಕಥಾ ಸಾಹಿತ್ಯದ ಆಯಾಮಗಳಿಂದ ನೋಡುವ ಮೊದಲ ಪುಸ್ತಕವಾಗಿದೆ.

೩) ಟಿ. ಪಿ. ಅಶೋಕ ಅವರು ವೈದೇಹಿ ಅವರ ಸಾಹಿತ್ಯ ಕುರಿತು ' ವೈದೇಹಿ ಕಥನ' ಕೃತಿ ರಚಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ವಿಷಯಕ್ಕೆ ಪೂರಕವಾದ ಮಹಾಪ್ರಬಂಧಗಳು

೧) ಡಾ. ಮಲ್ಲಿಕಾ ಘಂಟಿ ಅವರ ' ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯದ ಇತಿಹಾಸ' ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿರುವ ಅಪ್ರಕಟಿತ ಮಹಾಪ್ರಬಂಧವಾಗಿದೆ.

೨) 'ಮಹಿಳಾ ಕಥಾ ಸಾಹಿತ್ಯದಲ್ಲಿ ದಾಂಪತ್ಯದ ಪರಿಕಲ್ಪನೆ' ಜ್ಯೋತಿ ಮೇಟಿ ಅವರು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿರುವ ಅಪ್ರಕಟಿತ ಮಹಾಪ್ರಬಂಧವಾಗಿದೆ.

೩) 'ಆಧುನಿಕ ಕನ್ನಡ ಸಣ್ಣ ಕಥೆಗಳಲ್ಲಿ ಮಹಿಳಾ ಸಾಂಸ್ಕೃತಿಕ ಪ್ರತಿನಿಧೀಕರಣ' ಅಡೆಪ್ಪಕ್ಕೆ ಅವರು ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧವಾಗಿದೆ.

೪) 'ಸ್ವಾತಂತ್ರ್ಯೋತ್ತರ ಸಣ್ಣ ಕಥೆಗಳಲ್ಲಿ ಗ್ರಾಮೀಣ ಸಂಸ್ಕೃತಿ' ಲಕ್ಷ್ಮೀದೇವಿ.ಎಸ್ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧವಾಗಿದೆ.

೫) 'ದಲಿತ ಬಂಡಾಯ ಕಥನ ಸಾಹಿತ್ಯ : ಮಹಿಳೆಯರ ಪ್ರತಿರೋಧದ ನೆಲೆಗಳು' ಸವಿತಾ ಬೀಜಕಲ್ಲ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧವಾಗಿದೆ.

ಅಧ್ಯಾಯ : ಒಂದು

ಕನ್ನಡ ಮಹಿಳಾ ಕಥಾ ಸಾಹಿತ್ಯದ ಹಿನ್ನಲೆ

ಭಾರತ ದೇಶ ಕಥೆಗಳ ತವರೂರು. ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹುಟ್ಟಿಕೊಂಡ ಕಥಯೇ ಜನಪದ ಕಥೆಯಾಗಿದೆ. ಸ್ವಾತಂತ್ರ್ಯ ಪೂರ್ವದ ಅರುಣೋದಯ ಕಾಲದ ನಂಜನಗೂಡು ತಿರುಮಲಾಂಬ, ಕೊಡಗಿನ ಗೌರಮ್ಮ ಮುಂತಾದವರಿಂದ ಹಿಡಿದು ಸ್ವಾತಂತ್ರ್ಯ ನಂತರದ ಬಂಡಾಯ ಸಾಹಿತ್ಯದ ಕಥೆಗಳನ್ನು ಈ ಅಧ್ಯಾಯದಲ್ಲಿ ಪರಾಮರ್ಶನ ಮಾಡಲಾಗುವುದು.

ಅಧ್ಯಾಯ : ಎರಡು

ಕಥೆಗಾರ್ತಿಯರ ಬದುಕು ಮತ್ತು ಬರಹ

ಈ ಅಧ್ಯಾಯದಲ್ಲಿ ಕಥೆಗಾರ್ತಿಯರ ಸಾಹಿತ್ಯಿಕ ಸಾಧನೆಯನ್ನು ಚರ್ಚಿಸಲಾಗಿದೆ. ಹಿರಿಯ ತಲೆಮಾರಿನ ಕಥೆಗಾರ್ತಿಯರಾದ ತಿರುಮಲಾಂಬ ಅವರಿಂದ ನವ್ಯೋತ್ತರ ಕಾಲದ ಸಾರಾ ಅಬೂಬಕ್ಕರ್ ಅವರ 'ಚಪ್ಪಲಿಗಳು'(೧೯೮೪), 'ಖೆಡ್ಡಾ'(೧೯೯೯), ಕಥಾ ಸಂಕಲನಗಳನ್ನು ಬರೆದು ಮುಸ್ಲಿಂ ಸಮುದಾಯದಲ್ಲಿ ಅಗ್ರಗಣ್ಯರೆನಿಸಿದರು. ಗೀತಾ ನಾಗಭೂಷಣ ಅವರು ದಲಿತ ಸ್ತ್ರೀ ಬದುಕಿನ ಪದರುಗಳನ್ನು ಬಿಚ್ಚಿ ತೋರಿಸಿದ್ದಾರೆ. 'ಕ್ಯಾದಿಗಿ ಬನದಾಗ ಕಥೆಯಾಗಿ ನಿಂತವರು' ಇವರ ಕಥಾ ಸಂಕಲನವಾಗಿದೆ. ವೈದೇಹಿ, ವೀಣಾ ಶಾಂತೇಶ್ವರ್, ಬಿ.ಟಿ. ಲಲಿತಾ ನಾಯಕ್ ಅವರ ಕಥಾ ಸಂಕಲನಗಳು ಮತ್ತು ಅವರ ಸಾಹಿತ್ಯಿಕ ಸಾಧನೆಗಳು ಈ ಅಧ್ಯಾಯದಲ್ಲಿ ಗಮನಿಸಬಹುದು.

ಅಧ್ಯಾಯ : ಮೂರು

ಪ್ರತಿರೋಧ : ಪರಿಕಲ್ಪನಾತ್ಮಕ ಅಧ್ಯಯನ

ಪ್ರಸ್ತುತ ಈ ಅಧ್ಯಾಯದಲ್ಲಿ ಪ್ರತಿರೋಧದ ಅರ್ಥ ಅದರ ಸ್ವರೂಪ ಕುರಿತು ವಿಶ್ಲೇಷಿಸಲಾಗಿದೆ. ಪ್ರತಿರೋಧದ ಎರಡು ರೂಪಗಳನ್ನು ಒಳಗೊಂಡಿರುತ್ತದೆ. ಒಂದು ಶಾಂತ, ಇನ್ನೊಂದು ಹಿಂಸೆ. ಸಾಮಾಜಿಕ ಸುಖ ಬದುಕಿಗೆ ಮೋಸ ಆದಾಗ

ಪ್ರತಿಭಟನೆ ಅನ್ನೋದು ಸಹಜ. ಪ್ರಕ್ರಿಯೆಯಾಗಿದೆ. ಈ ರೀತಿ ಅದರ ಪರಿಕಲ್ಪನಾತ್ಮಕ ಚರ್ಚೆ ಇದರಲ್ಲಿ ಒಳಗೊಂಡಿದ್ದು ಕಾಣಬಹುದು.

ಅಧ್ಯಾಯ : ನಾಲ್ಕು

ಮಹಿಳಾ ಕಥಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು

ಈ ನಾಲ್ಕನೆಯ ಅಧ್ಯಾಯದಲ್ಲಿ ಮಹಿಳಾ ಕಥಾ ಸಾಹಿತ್ಯದಲ್ಲಿ ಬರುವ ಪ್ರತಿಭಟನಾತ್ಮಕ ವಿಭಿನ್ನ ನೆಲೆಗಳು ಮತ್ತು ಅವುಗಳ ಆಯಾಮಗಳ ಕುರಿತು ಸವಿಸ್ತಾರವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಮಹಿಳಾ ಕಥೆಗಾರ್ತಿಯರು ರಚಿಸಿರುವ ಕಥೆಗಳಲ್ಲಿ ಬರುವ ಪ್ರತಿರೋಧದ ವಿಭಿನ್ನ ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮನುಷ್ಯ ಚರಿತ್ರೆಯಲ್ಲಿ ಶತಮಾನಗಳಿಂದಲೂ ತನ್ನ ಹಕ್ಕಿಗಾಗಿ ಪ್ರತಿರೋಧಿಸುತ್ತ ಬಂದಿದ್ದಾರೆ. ಅದು ಶಿಕ್ಷಣ, ರಾಜಕೀಯ, ಬಡತನ, ದಲಿತರ ಶೋಷಣೆ, ಮಹಿಳೆಯರ ಮೇಲಿನ ಅತ್ಯಾಚಾರ ಇತ್ಯಾದಿ. ಸ್ತ್ರೀ ಪ್ರಾಚೀನ ಕಾಲದಿಂದಲೂ ಶೋಷಣೆಗೆ ಒಳಗಾಗುತ್ತಲೇ ಇದ್ದಾಳೆ. " ಹೆಣ್ಣಿಗೆ ನಾಲಿಗೆ ಇದೆ ಧ್ವನಿ ಇಲ್ಲ" ಎಂಬ ಅಸಹಾಯಕತೆಯಿಂದ ದೌರ್ಜನ್ಯ, ದಬ್ಬಾಳಿಕೆಯನ್ನು ಮೌನದಿಂದಲೇ ಪ್ರತಿರೋಧಿಸುತ್ತಾ ಬಂದಿದ್ದಾಳೆ. ಕಳೆದ ಶತಮಾನದಿಂದ ತನ್ನ ಹಕ್ಕಿಗಾಗಿ ಶೋಷಣೆಯ ವಿರುದ್ಧ ಧ್ವನಿ ಎತ್ತುದನ್ನು ಕಾಣಬಹುದು. ಈ ಹಿನ್ನಲೆಯಲ್ಲಿ ಮಹಿಳಾ ಕಥೆಗಾರ್ತಿಯರ ಕಥೆಗಳ ಮೂಲಕ ಪ್ರತಿಭಟನಾತ್ಮಕ ನೆಲೆಗಳನ್ನು ಹುಡುಕುವ ಪ್ರಯತ್ನ ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಗೀತಾ ನಾಗಭೂಷಣ ಅವರ 'ದಾಳ' ಕಥೆಯಲ್ಲಿ ಚುನಾವಣೆಗೆ ನಿಂತು ಕೊಲೆಯಾದ ದುರಂತ ನಾಯಕಿ ಕಾಶಿಗೆ ಆದ ಅನ್ಯಾಯವನ್ನು ಮಾದರ ಮರೆವ್ವಾಯಿ ತನ್ನಷ್ಟಕ್ಕೆ ತಾನು ದುಃಖವನ್ನು ಹೊರಹಾಕುತ್ತಲೇ ವಿರೋಧಿಸುತ್ತಾಳೆ. " ಎಂದಿಗಿದ್ರೂ ನಮ್ಮಂದಿಯ ಇದೆ ಗತಿ ಆಗ್ತಾರೋ ಯಣ್ಣಾ ಕೋಳಿಗೊಳಿಗೆ ಸಿಂದಿ ಕುಡಿಸಿ ಕಚ್ಚಾಡ್ಲಿಕ್ಕೆ ಬಿಟ್ಟಂಗ ತಳ್ಳಗಿನ ದೋ ಪಾರ್ಟಿ ಮಂದಿ ಈ ನಮ್ಮಂದಿಗಿ ಎಲೆಕ್ಷನಿಗಿ ಬಿಡ್ತಾರ, ಆಯ್ತು ಸಾಯೋದು ಇವೆ. ಸಾಯೋ ಆಟದ ಮಜಾ ನೋಡೋದು ಆ ಮೇಲಿನ ಮಂದೀನೆ. ಈ ನಮ್ಮ ಹುಂಬ ಮಂದಿಗೆಂದ ಬುದ್ಧಿ ಬರ್ತಾದು ಏನೋ". ಸಮಾಜದಲ್ಲಿ ದಲಿತ ಜನಾಂಗದವರನ್ನು ಹೊಡೆದಾಟಕ್ಕೆ ಬಿಟ್ಟು ಆಟ ನೋಡುವುದು ಇಂದು ನಿನ್ನೇಯದಲ್ಲ ಸುಮಾರು ವರ್ಷಗಳಿಂದ ನಡೆದು ಬಂದದ್ದು ಕಾಣಬಹುದು. ಸಾರಾ ಅಬೂಬಕ್ಕರ್ ಅವರು ಮುಸ್ಲಿಂ ಧರ್ಮದ ಹೆಣ್ಣು ಮಕ್ಕಳ ಅತಂತ್ರದ ಬದುಕನ್ನು ಕಥೆಗಳ ಮೂಲಕ ಬಿತ್ತರಿಸಿದ್ದಾರೆ. ಸಾರಾ ಅವರ "ಚಪ್ಪಲಿಗಳು" ಕಥೆಯಲ್ಲಿ ಸಮೀರಾಳ ತಂದೆ ಹಸನಬ್ಯಾರಿಯು "ಶಬೀರ್ ನೀನು ಗಂಡಸು ಏನು ಮಾಡಿದರೂ ನಡೆಯುತ್ತದೆ. ನಿನ್ನನ್ನು ಯಾರು ತಡೆಯಲಾರರು. ಆದರೆ ಸಮೀರಾ ಹೆಣ್ಣು, ಆಕೆಗೆ ಇಂಥದ್ದೆಲ್ಲ ರುಚಿ ಹತ್ತಿಸಿದರೆ ಅವಳ ಬುದ್ಧಿ ಹಾಳಾಗುತ್ತದೆ. ನಾಳೆ ತಾನೊಬ್ಬಳೇ ಸಿನಿಮಾಗೆ ಹೋಗುತ್ತೇನೆಂದು ಹೊರಟರೆ ಏನು ಮಾಡುವುದು?. ಹೆಂಗಸರನ್ನು ಕಾಲಿನ ಚಪ್ಪಲಿಯಂತೆ ಬಳಸಿಕೊಳ್ಳಬೇಕು.

ಬೇಕಾದಾಗ ಉಪಯೋಗಿಸಿ ಬೇಡವಾದಾಗ ಮೂಲೆಯಲ್ಲಿ ಬಿಟ್ಟುಬಿಡಬೇಕು. ಅದು ಬಿಟ್ಟು ತಲೆಯ ಮೇಲಿಟ್ಟುಕೊಂಡರೆ ಹೇಗೆ.? ಚಪ್ಪಲಿಯನ್ನು ಎಲ್ಲಿ ಇಡಬೇಕು ಅಲ್ಲೇ ಇಡಬೇಕು. ಇದಕ್ಕೆ ಪ್ರತ್ಯುತ್ತರವಾಗಿ ಶಬೀರನು ಹೇಳುವ ಮಾತೆಂದರೆ ''ಮಾವ ನಾನು ಚಪ್ಪಲಿಗೆ ಹುಟ್ಟಲಿಲ್ಲ ನನಗೆ ಜನ್ಮ ನೀಡದವಳು ಒಂದು ಹೆಣ್ಣು.'' ಎಂಬ ಮಾತು ಮೌನದಲ್ಲೇ ಅವರ ಮಾತಿನ ದಾಟಿಗೆ ಪ್ರತಿಭಟಿಸಿದ್ದು ಎದ್ದು ಕಾಣುತ್ತದೆ.

ಅಧ್ಯಾಯ : ಐದು

ಮಹಿಳಾ ಕಥಾ ಸಾಹಿತ್ಯದಲ್ಲಿ ಪ್ರತಿರೋಧದ ತೌಲನಿಕ ನೋಟ

ನವೋದಯ ಪೂರ್ವ ಸಾಹಿತ್ಯದಿಂದ ಹಿಡಿದು ನವ್ಯೋತ್ತರ ಬಂಡಾಯದ ಇಂದಿನ ಕಾಲಘಟ್ಟದ ಕಥೆಗಾರ್ತಿಯರೆಲ್ಲರೂ ಮಹಿಳಾ ತಾತ್ವಿಕತೆಯನ್ನು ಬೆಳೆಸಿರುವುದನ್ನು ಕಾಣಬಹುದು. ಇಲ್ಲಿ ತೌಲನಿಕವಾಗಿ ನೋಡುವುದಾದರೆ '' ಮೊದಲನೇ ಪೀಳಿಗೆಯ ಮಹಿಳಾ ಕಥೆಗಾರ್ತಿಯರು ಎದುರಿಸಿದ ಮುಖ್ಯ ಪ್ರಶ್ನೆಯ ಸ್ವರೂಪ ಸಾಮಾಜಿಕವಾದದ್ದು''. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಒಬ್ಬ ವ್ಯಕ್ತಿಯಾಗಿ ಗುರುತಿಸಲ್ಪಡದೆ ಪತ್ನಿ, ವಿಧವೆ, ವೇಶ್ಯೆ ಹೀಗೆ ನಾನಾ ರೀತಿಯ ಪುರುಷ ಸಂಬಂಧದ ಹೆಸರಲ್ಲಿ ಗುರುತಿಸಲ್ಪಡುತ್ತಾಳೆ. ಆದರೆ ಅವಳಿಗೆ ಸ್ವತಂತ್ರ ಅಸ್ತಿತ್ವವಿಲ್ಲ. ಎಲ್ಲಾ ಸ್ತ್ರೀ ಪ್ರತಿಮೆಗಳು ಈ ವ್ಯವಸ್ಥೆಯ ಸಂಕೇತಗಳಾಗಿಯೇ ಬರುವುದರಿಂದ, ಈ ಸಂಕೇತಗಳನ್ನು ಭಾಷೆಯಲ್ಲಿ ಸೃಷ್ಟಿಸುವ ಕೃತಿಯ ಸ್ವರೂಪವೇ ಪ್ರತಿಭಟನಾತ್ಮಕವಾದುದ್ದು. ಸ್ವಾತಂತ್ರ್ಯೋತ್ತರ ಕಾಲದ ಮಹಿಳಾ ಲೇಖಕಿಯರು ತಮ್ಮ ಬದುಕಿನ ಸಂಕೀರ್ಣತೆಯನ್ನು ತಮ್ಮ ಕಥೆಗಳಲ್ಲಿ ಮೂಡಿಸುವಲ್ಲಿ ಆಸಕ್ತಿ ಬೆಳೆಸಿಕೊಂಡರು.

ಸಮಾರೋಪ

ಈ ಅಧ್ಯಯನದಿಂದ ಕನ್ನಡ ಮಹಿಳಾ ಸಣ್ಣ ಕಥಾ ಪರಂಪರೆಯ ಪ್ರಮುಖ ಕಥೆಗಾರ್ತಿಯರ ಕಥೆಗಳಲ್ಲಿ ವ್ಯಕ್ತಗೊಂಡಿರುವ ಪ್ರತಿರೋಧದ ನೆಲೆಗಳ ಅವಲೋಕನವನ್ನು ಮಾಡುವ ಪ್ರಯತ್ನವಾಗಿದೆ. ಪ್ರಸ್ತುತ ' ಮಹಿಳಾ ಕಥಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು' ಎಂಬ ಶೀರ್ಷಿಕೆಯ ಮೂಲಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹೊಸ ನೆಲೆಯೊಂದರ ಸ್ವರೂಪವನ್ನು ತೆರೆದಿಡುವ ಪ್ರಯತ್ನವಾಗಿರುತ್ತದೆ.

ಅಧ್ಯಯನದ ಫಲಿತಗಳು

೧) ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಿಳಾ ಕಥಾ ಸಾಹಿತ್ಯಕ್ಕೂ ತನ್ನದೇ ಆದ ಒಂದು ಪರಂಪರೆ ಇದೆ. ಪುರುಷರುಗಿಂತ ಅವರ ಬರಹ ಶೈಲಿ ವಿಭಿನ್ನವಾಗಿದೆ ಎಂಬುದನ್ನು ಕಥೆಗಳ ಮೂಲಕ ಕಂಡುಕೊಳ್ಳಲಾಗುವುದು.

೨) ಕಥೆಗಳ ಮೂಲಕ ಸ್ತ್ರೀ ಅಸ್ತಿತ್ವದ ಸ್ವರೂಪವನ್ನು ಗುರುತಿಸಿಕೊಳ್ಳುವುದು

೩) ಪುರುಷ ಮತ್ತು ಮಹಿಳೆ ಎಂಬ ಅಂತರ ಸಂಬಂಧವನ್ನು ಲಿಂಗ ತಾರತಮ್ಯದಲ್ಲಿ ಅಡಗಿಕೊಂಡಿರುವುದು ವಿವೇಚಿಸುದು.

ಮುಂದಿನ ಅಧ್ಯಯನದ ಸಾಧ್ಯತೆಗಳು

೧) ಸ್ವಾತಂತ್ರ್ಯ ಪೂರ್ವದ ಮೊದಲ ಪೀಳಿಗೆಯ ಮಹಿಳಾ ಕಥೆಗಾರ್ತಿಯರ ಕಥಾ ಸಾಹಿತ್ಯವನ್ನು ಸಮಗ್ರವಾಗಿ ಅಧ್ಯಯನ ಮಾಡಬಹುದು.

೨) ಒಂದು ಕಾಲಘಟ್ಟದ ಮಹಿಳಾ ಕಥೆಗಾರ್ತಿಯರನ್ನು ಮತ್ತೊಂದು ಕಾಲಘಟ್ಟದ ಮಹಿಳಾ ಕಥೆಗಾರ್ತಿಯರೊಂದಿಗೆ ತೌಲನಿಕ ಪ್ರಯತ್ನ ಹೊಸ ಸಾಧ್ಯತೆಗಳಾಗಿವೆ.

೩) ನವೋದಯ ಪೂರ್ವದ ನವ್ಯೋತ್ತರ ನಂತರದ ಮಹಿಳಾ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನ ಮಾಡಬಹುದು.
೪)ಮುಂದಿನ ಅಧ್ಯಯನದ ಸಾಧ್ಯತೆಗಳ ಬಗ್ಗೆ ಸಮಾಲೋಚಿಸಲಾಗುವುದು

ಅನುಬಂಧಗಳು

ಆಕರ ಗ್ರಂಥಗಳು

೧) ಗೀತಾ ನಾಗಭೂಷಣ – ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ ಸಮಗ್ರ ಕಥೆಗಳು

೨) ಕೊಡಗಿನ ಗೌರಮ್ಮ – ಎಚ್. ನಾಗವೇಣಿ

೩) ಸಾರಾ ಅಬೂಬಕ್ಕರ್ – ಚಪ್ಪಲಿಗಳು

೪) ವೀಣಾ ಶಾಂತೇಶ್ವರ್ – ನಡೆದಿದ್ದೇ ದಾರಿ ಸಮಗ್ರ ಕಥನ ಸಾಹಿತ್ಯ

೫) ವೈದೇಹಿ – ವೈದೇಹಿ ಕಥೆಗಳು

೬) ಸಾರಾ ಅಬೂಬಕ್ಕರ್ – ಡಾ. ಸಾರಾ ಅಬೂಬಕ್ಕರ್ ಅವರ ಸಮಗ್ರ ಕಥೆಗಳು

ಪರಾಮರ್ಶನ ಗ್ರಂಥಗಳು

೧)ಆಮೂರ ಜಿ.ಎಸ್ – ಕನ್ನಡ ಕಥನ ಸಾಹಿತ್ಯ : ಸಣ್ಣ ಕಥೆ

ಪ್ರ: ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೧೨

೨) ಅಶೋಕ .ಟಿ.ಪಿ – ವೈದೇಹಿ ಕಥನ

ಪ್ರ : ಅಕ್ಷರ ಪ್ರಕಾಶನ ಹೆಗ್ಗೋಡು, ೨೦೧೩

೩) ಕರಿಗೌಡ ಬೀಚನಹಳ್ಳಿ – ಶತಮಾನದ ಸಣ್ಣ ಕಥೆಗಳ ಸಮೀಕ್ಷೆ

ಪ್ರ : ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೧೧

೪) ಕೀರ್ತಿನಾಥ ಕುರ್ತುಕೋಟಿ – ಯುಗಧರ್ಮ ಮತ್ತು ಸಾಹಿತ್ಯ ದರ್ಶನ

ಪ್ರ : ಕುರ್ತುಕೋಟಿ ಮೆಮೊರಿಯಲ್ ಟ್ರಸ್ಟ, ಧಾರವಾಡ, ೨೦೦೯

೫) ವಿಜಯಶ್ರೀ ಸಬರದ – (ಸಂ) ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ ಸಂಪುಟ – ೨ ಸಣ್ಣ ಕಥೆ

ಪ್ರ : ಪ್ರಸಾರಾಂಗ ಕ.ರಾ.ಅ.ಮ.ವಿ.ವಿ . ವಿಜಯಪುರ, ೨೦೨೩

೬) ವನಯಾ ನಾಯಕ – ಕನ್ನಡ ಮಹಿಳಾ ಕಥಾ ಸಾಹಿತ್ಯದ ವಿಕಾಸದ ಘಟ್ಟಗಳು

ಪ್ರ : ಕರ್ನಾಟಕ.ವಿ.ವಿ. ಧಾರವಾಡ, ೧೯೯೬

೭) ತೇಜಸ್ವಿನಿ ನಿರಂಜನ್ ಮತ್ತು ಸೀಮಂತಿನಿ ನಿರಂಜನ್ – (ಸಂ) ಸ್ತ್ರೀವಾದಿ ಸಾಹಿತ್ಯ ವಿಮರ್ಶೆ

ಪ್ರ : ಕ್ರೈಸ್ತ ಕಾಲೇಜು, ಬೆಂಗಳೂರು

೮) ಸವಿತಾ ಬಿಜಕಲ್ಲ – ದಲಿತ ಬಂಡಾಯ ಕಥನ ಸಾಹಿತ್ಯ : ಮಹಿಳೆಯರ ಪ್ರತಿರೋಧದ ನೆಲೆಗಳು

ಕನ್ನಡ ವಿಶ್ವವಿದ್ಯಾಲಯ ಹಂಪಿ, ಅಪ್ರಕಟಿತ ಮಹಾಪ್ರಬಂಧ

೯) ಗೀತಾ ನಾಗಭೂಷಣ : ಮಹಿಳಾ ಮಾರ್ಗ

(ಸಂ) ಡಾ.ಕೆ. ಷರೀಫಾ –ಬಸವರಾಜ ಸೂಳಿಭಾವಿ, ಲಡಾಯಿ ಪ್ರಕಾಶನ ಗದಗ

೧೦) ಡಾ.ಡಿ. ಮಂಗಳ ಪ್ರಿಯದರ್ಶಿನಿ – ಸ್ತ್ರೀ ಮತ್ತು ಮಹಿಳಾ ಅಧ್ಯಯನದ ಒಂದು ಪ್ರವೇಶಿಕೆ

ಪ್ರ : ಹೇಮಂತ ಸಾಹಿತ್ಯ ಬೆಂಗಳೂರು,೨೦೦೭